**<u>ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ</u>**

ಸಿ.ಸಿ. ನಂ. 460/2019

ಸಿ.ಡಬ್ಲೂಃ 3 ಪಿ.ಡಬ್ಲೂಃ 5

| | |
|---|---|
| ಹೆಸರುಃ | ವಿಷ್ಣು |
| ತಂದೆಯ ಹೆಸರುಃ | ಸಿದ್ದಪ್ಪ ಜಾದವ್ |
| ವಯಸ್ಸುಃ | 42 ವರ್ಷ |
| ಉದ್ಯೋಗಃ | ಸಿವಿಲ್ ಕಾಂಟ್ರಕ್ಟರ್ |
| ವಿಳಾಸಃ | ಕುರಡಗಿ ತಾಃ ರೋಣ |

**<u>ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 28/08/2024 ರಂದು ಪ್ರಮಾಣೀಕರಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ PKU ವಕೀಲರಿಂದಃ</u>**

ಚಾಸಾ-1 ಮತ್ತು 4 ರವರು ಸುಮಾರು 15 ವರ್ಷಗಳಿಂದ ಪರಿಚಯ. ಪೊಲೀಸರು ನನಗೆ ನೊಟೀಸ್ ಕೊಟ್ಟಿರಲಿಲ್ಲ. ಪೊಲೀಸರು ನಮಗೆ ಖುದ್ದಾಗಿ ಈ ಸ್ಥಳದಲ್ಲಿ ಹಾಜರು ಆಗಿ ಎಂದು ಹೇಳಿರಲಿಲ್ಲಾ ಎಂದರೆ ನಿಜ. ನಾನು ಸಹಿ ಮಾಡಿದ ಕಾಗದವನ್ನು ನಾನು ಓದಿ ಸಹಿ ಮಾಡಿದ್ದೇನೆ. ಈಗ ನನಗೆ ಅದರಲ್ಲಿ ಏನು ಬರೆದಿದೆ ಎಂದು ನೆನಪಿಲ್ಲ. ಅದು ಎಷ್ಟು ಪುಟ ಇತ್ತು ಎಂದು ನನಗೆ ಈಗ ನೆನಪಿಲ್ಲ. ಆ ದಿನ ನನ್ನ ಸಮಕ್ಷಮ ಮಹಜರ್ ಮಾಡಿದರು, ನಾನು ಅದನ್ನು ಓದಿ ತಿಳಿದುಕೊಂಡು ಸಹಿ ಮಾಡಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದನ್ನು ಯಾರು ಬರೆದರು ಎಂದು ನನಗೆ ಈಗ ನೆನಪಿಲ್ಲ. ಸಬ್ ರಜಿಸ್ಟರ ಆಫೀಸ್ ನಲ್ಲಿ ಬರೆಯಲಾಯಿತು.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

ADITYA R KALAL

Digitally signed by ADITYA R KALAL
Date: 2024.08.28 18:30:32 +0530

**(ಆದಿತ್ಯ ಆರ್ ಕಲಾಲ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ

ನ್ಯಾಯಾಧೀಶರು ರೋಣ .

**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ. 460/2019

ಸಿ.ಡಬ್ಲೂಃ 4 ಪಿ.ಡಬ್ಲೂಃ 6

ಹೆಸರುಃ ವೀರಪ್ಪ

ತಂದೆಯ ಹೆಸರುಃ ಮಲ್ಲಪ್ಪ ಬನ್ನಿಗೋಳ

ವಯಸ್ಸುಃ 60 ವರ್ಷ

ಉದ್ಯೋಗಃ ಒಕ್ಕಲುತನ

ವಿಳಾಸಃ ಕುರಡಗಿ ತಾಃ ರೋಣ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 28/08/2024 ರಂದು ಪ್ರಮಾಣೀಕರಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿತರ ಪರ ಶ್ರೀ PKU ವಕೀಲರಿಂದಃ**

3. ನನ್ನ ತಾಯಿ ಮತ್ತು ತಂಗಿ ಮತ್ತು ಅವಳ ಗಂಡ ಯಾವ ದಿನ ವಕೀಲರನ್ನು ಬೇಟಿ ಮಾಡಿದರು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ. ಯಾವ ಇಸವಿಯೆಂದು ನನಗೆ ನೆನಪಿಲ್ಲ. ಪೊಲೀಸರು ನನ್ನ ತಂಗಿ ಮತ್ತು ಅವಳ ಗಂಡ ವಿನೋದನ ಹೇಳಿಕೆ ಪಡೆದುಕೊಂಡಿಲ್ಲ. ನನ್ನ ತಾಯಿ ಸಿವಿಲ್ ಕೇಸ್ ನ್ನು ಮೊದಲು ಮಾಡಿದ್ದರು. ನಂತರ ಇದೇ ನ್ಯಾಯಾಲಯದಲ್ಲಿ ನನ್ನ ತಾಯಿ ಆರೋಪಿತರ ವಿರುದ್ಧ PCR ಹಾಕಿದ್ದರು. ಸಿವಿಲ್ ಕೇಸ್ ದಾಖಲು ಆಗಿ ಅದು ಮುಕ್ತಾಯವಾಗುವವರೆಗೂ ನನ್ನ ತಾಯಿ ಎಲ್ಲಿಯಾ ಕೂಡ ದೂರು ಸಲ್ಲಿಸಿರಲಿಲ್ಲಾ ಎಂದರೆ ಸಾಕ್ಷಿ ಆ ಸಿವಿಲ್ ಕೇಸ್ ಪೆಡಿಂಗ್ ಇತ್ತು ಎಂದು ಹೇಳುತ್ತಾರೆ. ಸಿವಿಲ್ ಕೇಸ್ ಯಾವಾಗ ಮುಕ್ತಾಯವಾಗಿದೆ ಎಂದು ನನಗೆ ಗೊತ್ತಿಲ್ಲ. ನನ್ನ ತಾಯಿಯನ್ನು ಮುಂದೆಬಿಟ್ಟು ಆರೋಪಿತರ ವಿರುದ್ಧ ಒಂದು ಸುಳ್ಳು ಕೇಸ್ ಮಾಡಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ತಾಯಿಯ ಹೆಸರಿನಲ್ಲಿ ಒಂದು ಸುಳ್ಳು ಖೊಟ್ಟಿ ಹಕ್ಕು ಬಿಟ್ಟು ಪತ್ರ ಮಾಡಿಸಿಕೊಂಡಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**( ಆದಿತ್ಯ ಆರ್ ಕಲಾಲ್ )**

ಹೆಚ್ಚುವರಿ ಸಿವಿಲ್ ಹಾಗೂ ಜೆ .ಎಮ್ .ಎಫ್.ಸಿ

ನ್ಯಾಯಾಧೀಶರು ರೋಣ .